## ಭಾರತೀಯಜನತಾ ಪಾರ್ಟಿ
## 11, ಅಶೋಕ ರಸ್ತೆ, ನವದೆಹಲಿ–110001

ಡಿಸೆಂಬರ್ 12, 2013

## ಲೋಕ ಸಭಾ ವಿರೋಧ ಪಕ್ಷದ ನಾಯಕಿ ಶ್ರೀಮತಿ ಸುಷ್ಮಾ ಸ್ವರಾಜ್ ಮತ್ತುರಾಜ್ಯ ಸಭಾ ವಿರೋಧ ಪಕ್ಷದ ನಾಯಕರಾದ ಶ್ರೀ ಅರುಣ್‌ಜೇಟ್ಲಿಅವರಜಂಟಿ ಹೇಳಿಕೆ

ಸರ್ಕಾರ ಪರಿಚಯಿಸಿದ ಮಾದರಿಯಲ್ಲೇ ಲೋಕಪಾಲ್ ಮಸೂದೆಯನ್ನುಡಿಸೆಂಬರ್ 27, 2011 ರಂದುಲೋಕ ಸಭೆ ಅಂಗೀಕರಿಸಿತ್ತು.ಲೋಕ ಸಭಾ ಅಂಗೀಕರಿಸಿದ ಈ ಮಸೂದೆಯಅನ್ವಯ ಲೋಕಪಾಲರನ್ನು ಬಹುಪಾಲು ಸರ್ಕಾರವೇ ನೇಮಿಸುತ್ತದೆ ಮತ್ತುಅದರಕಾರ್ಯಯೋಜನೆಯು ಸರ್ಕಾರದ ನಿಯಂತ್ರಣದಲ್ಲಿರುತ್ತದೆ.ಈ ಮಸೂದೆಯು ಸರ್ಕಾರದ ಸಂಪೂರ್ಣ ನಿಯಂತ್ರಣದಲ್ಲಿರುವ ಸಿಬಿಐಯನ್ನು ತನಿಖಾ ಸಂಸ್ಥೆಯಾಗಿ ಪರಿಗಣಿಸುತ್ತದೆ.ಈ ಮಸೂದೆ ಬಿಜೆಪಿಗೆಕದಾಪಿ ಒಪ್ಪಿಗೆಇಲ್ಲ. ಈ ಮಸೂದೆಯನ್ನುಡಿಸೆಂಬರ್ 29, 2011ರಂದು ರಾಜ್ಯ ಸಭೆಯಲ್ಲಿಚರ್ಚಿಸಲಾಯಿತು.ಮಸೂದೆಗೆ ಹಲವಾರುತಿದ್ದುಪಡಿತರುವಂತೆ ವಿಪಕ್ಷದ ಸದಸ್ಯರು ಸೂಚಿಸಿದ್ದರು.ಬಹುಪಾಲು ಸದಸ್ಯರು ತಿದ್ದುಪಡಿಗಳ ಪರವಾಗಿದ್ದರು, ಆದರೆ, ಡಿಸೆಂಬರ್ 29, 2011ರಂದು ರಾಜ್ಯ ಸಭೆ ಅನಿರ್ದಿಷ್ಟಕಾಲದವರೆಗೂ ಮುಂದೂಡಲ್ಪಟ್ಟಿತು.ಇದರ ನಂತರ, ಮಸೂದೆಯನ್ನುಕಾಂಗ್ರೆಸ್ ಸದಸ್ಯರಾದ ಶ್ರೀ ಸತ್ಯವ್ರತ್‌ಚತುರ್ವೇದಿಯವರಅಧ್ಯಕ್ಷತೆಯಲ್ಲಿರಾಜ್ಯ ಸಭಾಆಯ್ಕೆ ಸಮಿತಿಗೆಒಪ್ಪಿಸಲಾಯಿತು.ಆಯ್ಕೆ ಸಮಿತಿಯು ಹಲವಾರು ಸಭೆಗಳನ್ನು ನಡೆಸಿತು ಹಾಗೂ ತನ್ನ ವರದಿಯನ್ನುರಾಜ್ಯಸಭೆಯಲ್ಲಿಡಿಸೆಂಬರ್ 23, 2012ರಂದು ಸಲ್ಲಿಸಿತು.ಅಂದಿನಿಂದ ವರದಿಯುರಾಜ್ಯ ಸಭೆಯಲ್ಲಿಇತ್ಯರ್ಥವಾಗದೆ ಉಳಿದಿದೆ.ರಾಜ್ಯ ಸಭೆಯಅನುಸರಣೆ ನಿಯಮಗಳು ಹಾಗೂ ಕಾರ್ಯಕಲಾಪ ನಡುವಳಿಗಳ ನಿಯಮ 91ರ ಅಡಿ ಆಯ್ಕೆ ಸಮಿತಿಯ ವರದಿಯನ್ನು ಶಾಸಕಾಂಗ ಸಭೆಯಲ್ಲಿ ಮಂಡಿಸಲಾಯಿತು. ಶಾಸಕಾಂಗ ಸಭೆಯೊಂದೇ ವರದಿಯನ್ನುತಿದ್ದಬಹುದು ಹಾಗೂ ಅಂಗೀಕರಿಸಬಹುದು.ವರದಿಗೆ ಸರ್ಕಾರವೇ ತಿದ್ದುಪಡಿಗಳನ್ನು ಪ್ರಸ್ತಾಪಿಸುವುದರಿಂದಆಯ್ಕೆ ಸಮಿತಿಯ ವರದಿಗೆತದ್ವಿರುದ್ಧವಾಗಿ ವರ್ತಿಸಿದಂತಾಗುತ್ತದೆ.

ಸಂಬಂಧಪಟ್ಟ ಕೆಲವು ವಿಚಾರಗಳಲ್ಲಿ ಆಯ್ಕೆ ಸಮಿತಿಯಅಭಿಪ್ರಾಯಕ್ಕೆ ಸ್ವಲ್ಪ ಭಿನ್ನವಾದಅಭಿಪ್ರಾಯವನ್ನು ಭಾಜಪ ಹೊಂದಿದ್ದರೂ, ಆಯ್ಕೆ ಸಮಿತಿಯ ಬಹುಪಾಲು ವಿಚಾರಗಳಲ್ಲಿ ಸರ್ವಾನುಮತದ ಸಲಹೆಗಳು ಮೂಡಿದ್ದವು ಎಂಬ ಅಭಿಪ್ರಾಯ ಭಾಜಪ ಹೊಂದಿದೆ.ಆಯ್ಕೆ ಸಮಿತಿಯ ಸರ್ವಾನುಮತದ ಸಲಹೆಗಳನ್ನು ರಾಜ್ಯ ಸಭಾ ಕೈಗೆತ್ತಿಕೊಳ್ಳುವುದು ಸೂಕ್ತ.ಸಂಸತ್‌ನಉಭಯ ಸದನಗಳು ಹಾಗೂ ಆಯ್ಕೆ ಸಮಿತಿಯು ಈಗಾಗಲೇ ಮಸೂದೆಯಕುರಿತು ಕೂಲಂಕುಶ ಚರ್ಚೆ ನಡೆಸಿರುವ ಹಿನ್ನಲೆಯಲ್ಲಿಆಯ್ಕೆ ಸಮಿತಿಯ ಸರ್ವಾನುಮತದ ಸಲಹೆಗಳನ್ನು ರಾಜ್ಯ ಸಭಾಒಪ್ಪಿಗೆ ಸೂಚಿಸಿ ಅದನ್ನು ಲೋಕ ಸಭೆಗೆ ಕಳಿಸಬೇಕು ಎಂಬುದು ಭಾಜಪಅಭಿಮತವಾಗಿದೆ.ಪ್ರಸ್ತುತ, ಸಂಸತ್‌ನಉಭಯ ಸದನಗಳ ಹಾಗೂ ಭಾರತದಲ್ಲಿ ಸಾರ್ವಜನಿಕಜೀವನದ ವಿಶ್ವಾಸಾರ್ಹತೆಕಾಪಾಡುವದೃಷ್ಟಿಯಿಂದಆಯ್ಕೆ ಸಮಿತಿಯ ಸರ್ವಾನುಮತದ ಶಿಫಾರಸ್ಸುಗಳನ್ನು ಅನುಷ್ಠಾನಕ್ಕೆ ತರುವುದು ಮುಖ್ಯವೆನಿಸಿದೆ.

ಸಮಾಜವಾದಿ ಪಾರ್ಟಿ ಹಾಗೂ ಬಿಎಸ್‌ಪಿಗಳು ಸತತವಾಗಿ ಸದನದ ಕಲಾಪಕ್ಕೆ ಅಡ್ಡಿವುಂಟುಮಾಡುತ್ತಿವೆ. ಕಳೆದ ನಾಲ್ಕುವರೆ ವರ್ಷಗಳಿಂದ ಅಲ್ಪಸಂಖ್ಯಾತ ಸರ್ಕಾರದ ಉಳಿಯುವಿಕೆಯನ್ನು ಈ ಪಕ್ಷಗಳು ಖಾತರಿ ಪಡಿಸಿವೆ. ಲೋಕಪಾಲ್ ಮಸೂದೆಅಂಗೀಕಾರದಲ್ಲಿ ಈಗಾಗಲೇ ಬಹಳಷ್ಟು ವಿಳಂಬವಾಗಿರುವಕಾರಣ, ಕಲಾಪಕ್ಕೆ ಈ ಪಕ್ಷಗಳು ಅಡ್ಡಿಪಡಿಸಿದರೂ(ಸರ್ಕಾರವೇ ಇವರುಗಳ ಮೂಲಕ ಸದನದಲ್ಲಿಗದ್ದಲವುಂಟು ಮಾಡಿಸುತ್ತಿದೆಎಂಬುದು ನಮ್ಮ ಅನಿಸಿಕೆ) ಮಸೂದೆಯನ್ನುಯಾವುದೇಚರ್ಚೆಯಿಲ್ಲದೆಯುಪಿಎ ಹಾಗೂ ಎನ್‌ಡಿಎ ಒಕ್ಕೂಟಗಳು ಒಟ್ಟುಸೇರಿಆಯ್ಕೆಸಮಿತಿಯ ಸರ್ವಾನುಮತದ ಶಿಫಾರಸ್ಸುಗಳನ್ನು ಅನುಮೋದಿಸಬೇಕೆಂದು ನಾವು ಪ್ರಸ್ತಾಪಿಸುತ್ತೇವೆ. ನಮ್ಮ ಪ್ರಸ್ತಾಪಕ್ಕೆ ಸ್ಪಂದಿಸುವುದು ಬಿಡುವುದು ಸರ್ಕಾರದಕೈಯಲ್ಲಿದೆ. ಆಯ್ಕೆ ಸಮಿತಿಯ ಸರ್ವಾನುಮತದ ಶಿಫಾರಸ್ಸುಗಳಿಗೆ ತಿದ್ದುಪಡಿ ಮಾಡಿದರೆಅಥವಾ ಬೆಂಬಲಿತ ಪಕ್ಷಗಳಿಂದ ಸದನದಲ್ಲಿಗದ್ದಲ ಎಬ್ಬಿಸಲು ಅವಕಾಶ ಕಲ್ಪಿಸಿಕೊಟ್ಟಲ್ಲಿ, ಲೋಕಪಾಲ ಮಸೂದೆಕುರಿತು ಸರ್ಕಾರಕ್ಕೆಆಸಕ್ತಿಯಿಲ್ಲವೆಂದು ಸ್ಪಷ್ಟವಾಗುತ್ತದೆ.ಚರ್ಚೆಯಿಲ್ಲದೆ ಮಸೂದೆಅಂಗೀಕರಿಸಲು ನಾವು ಸಿದ್ಧವೆಂದು ಪುನರುಚ್ಚರಿಸುತ್ತೇವೆ.

(ಆರ್ ಕೆ ಸಿನ್ಹಾ)

ಕಾರ್ಯದರ್ಶಿ, ಭಾಜಪ ಸಂಸದೀಯ ಪಾರ್ಟಿ